ಆ) ರಾಜ್ಯದಲ್ಲಿ ಎಷ್ಟು ಜನ ರೈತರು ಡಿಸಿಎಚ್-32 ಬೀಜೋತ್ಪಾದನೆ ಮಾಡಲು ಬೇಡಿಕೆ ಸಲ್ಲಿಸಿದ್ದರು, ಅವರಲ್ಲಿ ಎಷ್ಟು ಜನರಿಗೆ ಪ್ಲಾಟ್ ನೀಡಲಾಗಿದೆ ;

ಇ) ಡಿಸಿಎಚ್-32 ಬೀಜವನ್ನು ರೈತರಿಂದ ನಿಗಮ ಯಾವ ಬೆಲೆಗೆ ಖರೀದಿಸಿ ಯಾವ ಬೆಲೆಯಲ್ಲಿ ಮಾರಾಟ ಮಾಡುತ್ತಲಿದೆ.

ಉತ್ತರ : ಶ್ರೀ ಬಿ.ಎಲ್.ಗೌಡ (ಕೃಷಿ ಸಚಿವರು). - ಆ) 1982-83ನೇ ಸಾಲಿನಲ್ಲಿ ಡಿಸಿಎಚ್ 32 ಹತ್ತಿ ಬೀಜೋತ್ಪಾದನೆಯನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ಮತ್ತು ಕೃಷಿ ಇಲಾಖೆಗೆ ಮಾತ್ರ ಕೊಡಲಾಗಿತ್ತು. 1983-84ನೇ ಸಾಲಿನಲ್ಲಿ ಮೊದಲನೆ ಬಾರಿಗೆ ರೈತರಿಗೆ ಇದನ್ನು ಕೊಡಲಾಯಿತು. ಆಗಸ್ಟ್ ತಿಂಗಳಿನಲ್ಲಿ ಮುಂಗಡ ಠೇವಣಿ 1250 ರೂಪಾಯಿ ಇದ್ದು ನಂತರ ಪ್ಲಾಟಿಗೆ 500 ರೂಪಾಯಿಗೆ ಇಳಿಸಲಾಯಿತು.

ಆ) 433 ಅರ್ಜಿ ಬಂದಿದ್ದು 429 ಅರ್ಜಿದಾರರಿಗೆ ಪ್ಲಾಟು ಹಂಚಲಾಗಿದೆ.

ಇ) ಈಗ ಸದ್ಯಕ್ಕೆ ಖರೀದಿ ದರ ಕೇಜಿಗೆ 65 ರೂಪಾಯಿ ಎಂದು ನಿಗದಿಪಡಿಸಲಾಗಿದೆ. ಮಾರಾಟ ದರವನ್ನೂ ನಿಗದಿಪಡಿಸಿಲ್ಲ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ (ಆ)ಗೆ ಉತ್ತರವಾಗಿ 1982-83ನೇ ಸಾಲಿನಲ್ಲಿ ಡಿಸಿಎಚ್ ಹತ್ತಿ ಬೀಜೋತ್ಪಾದನೆಯನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ಮತ್ತು ಕೃಷಿಇಲಾಖೆಗೆ ಮಾತ್ರ ಕೊಡಲಾಯಿತು. 1983-84ನೇ ಸಾಲಿನಲ್ಲಿ ಮೊದಲನೆ ಬಾರಿ ರೈತರಿಗೆ ಇದನ್ನು ಕೊಡಲಾಯಿತು. ಆಗಸ್ಟ್ ತಿಂಗಳಲ್ಲಿ ಮುಂಗಡ ಠೇವಣಿ 1250 ರೂಪಾಯಿ ಇದ್ದು ನಂತರ ಪ್ಲಾಟಿಗೆ 500 ರೂಪಾಯಿಗೆ ಇಳಿಸಲಾಯಿತು ಅಂತ ಹೇಳಿದ್ದೀರಿ. ಈ ಬೀಜೋತ್ಪಾದನೆಯಲ್ಲಿ ಇಷ್ಟು ಇಳುವರಿ ಬಂದಿದೆಯೆಲ್ಲಾ ಇದರಿಂದ ನಿಗಮಕ್ಕೆ ಲಾಭ ಆಯಿತೇ ಅಥವಾ ನಷ್ಟವಾಯಿತೇ ಅನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್. ರೇವಣ್ಣ (ಕೃಷಿ ರಾಜ್ಯ ಮಂತ್ರಿಗಳು).— ಈ ನಿಗಮವು ಲಾಭ ಅಥವಾ ನಷ್ಟ ಇಲ್ಲದೆ ಕೆಲಸ ಮಾಡಬೇಕು ಎಂಬ ಉದ್ದೇಶವಿದೆ. ಲಾಭದ ದೃಷ್ಟಿಯನ್ನು ಹೊಂದಿಲ್ಲ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್. — ಪ್ರಶ್ನೆ (ಇ)ಗೆ ಉತ್ತರವಾಗಿ ಈಗ ಸದ್ಯಕ್ಕೆ ಖರೀದಿ ದರ ಕೆಜಿಗೆ 65ರೂಪಾಯಿ ಎಂದು ನಿಗದಿಪಡಿಸಲಾಗಿದೆ. ಆದರೆ ಮಾರಾಟ ದರವನ್ನು ಇನ್ನೂ ನಿಗದಿಪಡಿಸಿಲ್ಲ ಅಂತ ಹೇಳಿದ್ದೀರಿ, ಈ ನಿಗಮದವರು ಹೊರಗಡೆ ಮಾರ್ಕೆಟ್‌ನಲ್ಲಿ ಇದನ್ನು 125 ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ. ಅರ್ಧಕ್ಕೆ ಅರ್ಧ ಲಾಭವನ್ನು ಈ ನಿಗಮದವರು ತೆಗೆದುಕೊಳ್ಳುತ್ತಾರೆ. ಕಷ್ಟಪಟ್ಟು ಬೆಳೆದ ರೈತನಿಗೆ ಏನೂ ಲಾಭವಿಲ್ಲ. ಆದುದರಿಂದ ರೈತನಿಂದ ಆ ನಿಗಮದವರು ಕೊಳ್ಳುವ ತಕ್ಕಂಥಾ ಬೆಲೆಯನ್ನು ಕನಿಷ್ಟಪಕ್ಷ 100 ರೂಪಾಯಿಗಾದರೂ ಹೆಚ್ಚಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರೇವಣ್ಣ.—ಮಾನ್ಯ ಸದಸ್ಯರಿಗೆ ತಿಳಿಸಬೇಕಾದರೆ ನಾವು ಈಗ ಕೊಡುತಕ್ಕಂಥಾ ದರದ ಪ್ರಕಾರ ಅವರಿಗೆ ಎಕರೆಗೆ 10 ಸಾವಿರ ವರಮಾನದವರಿಗೆ ಬರುತ್ತದೆ ಬೆಳೆಯುವ ಮತ್ತು ಕೊಳ್ಳುವ ದೃಷ್ಟಿಯಿಂದ ಯಾರಿಗೂ ಕೂಡ ನಷ್ಟವಾಗದೇ ಇರುವ ಹಾಗೆ ಇದನ್ನು ಪರಿಶೀಲನೆ ಮಾಡಿ ಈ ರೀತಿಯಾದ ದರವನ್ನು ಗೊತ್ತು ಮಾಡಿದ್ದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಬೆಲೆಯ ವಿಮರ್ಶೆಗಾಗಿ ತಾವು ರೈತರ ಒಂದು ಸಮಿತಿಯನ್ನು ಮಾಡಿದ್ದುದು ನಿಜವೇ ?

ಶ್ರೀ ಎಸ್. ರೇವಣ್ಣ.— ಬೆಲೆಗಳನ್ನು ವಿಮರ್ಶೆ ಮಾಡಲಿಕ್ಕೆ ನೇಮಕ ಮಾಡಿದಂಥ ಸಮಿತಿಯಲ್ಲಿ ರೈತರು ಇದ್ದಾರೆ, ಇತರೆ ಸದಸ್ಯರು ಇದ್ದಾರೆ. ಅವರೆಲ್ಲರೂ ಸೇರಿ ಇದನ್ನು ತೀರ್ಮಾನ ಮಾಡುತ್ತಾರೆ.

ವಿಷಯ : ಸಮಗ್ರ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮ :

ಪ್ರಶ್ನೆ 208 (589) ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ 1983-84 ರಲ್ಲಿ ಸಮಗ್ರ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮ ಯೋಜನೆಯಲ್ಲಿ ಎಷ್ಟು ಕುಟುಂಬಗಳಿಗೆ ಪ್ರಯೋಜನ ದೊರಕಿಸಿಕೊಡುವ ಯೋಜನೆ ಕೈಗೊಳ್ಳಲಾಗಿದೆ ?

ಆ. 1983-84ರಲ್ಲಿ ಈ ಯೋಜನೆಗೆ ತೆಗೆದಿಟ್ಟ ಸಹಾಯ ಧನದ ಮೊತ್ತವೆಷ್ಟು ;

ಇ. 31-12-83ರವರೆಗೆ ಪ್ರಯೋಜನ ಪಡೆದಿರುವ ಕುಟುಂಬಗಳ ಸಂಖ್ಯೆ ಎಷ್ಟು ;

ಈ. 31-12-83ರವರೆಗೆ ಬಿಡುಗಡೆ ಮಾಡಿದ ಸಹಾಯಧನದ ಮೊತ್ತವೆಷ್ಟು ?

ಉತ್ತರ : ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) — ಅ. 1983-84 ನೇ ಸಾಲಿನಲ್ಲಿ ಸಮಗ್ರ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮದ ಯೋಜನೆಯಲ್ಲಿ ಒಟ್ಟು 1,05,000 ಕುಟುಂಬಗಳಿಗೆ ಪ್ರಯೋಜನ ದೊರಕಿಸಿ ಕೊಡುವ

ಯೋಜನೆ ಕೈಗೊಳ್ಳಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1 ರಲ್ಲಿ ನೋಡಬಹುದು.

ಆ. 1983 84ರಲ್ಲಿ ಈ ಯೋಜನೆಗೆ ರೂ. 672.056 ಲಕ್ಷ ಸಹಾಯಧನ ಪೊತ್ತವಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1 ರಲ್ಲಿ ನೋಡಬಹುದು.

ಇ. 1-1-83 ರಿಂದ 31-12-83 ರವರೆಗೆ ಒಟ್ಟು 1,56,002 ಕುಟುಂಬಗಳು ಪ್ರಯೋಜನ ಪಡೆದಿವೆ. ಜಿಲ್ಲಾವಾರು ಮಾಹಿತಿಗಾಗಿ ಅನುಬಂಧ 1 ರಲ್ಲಿ ನೋಡಬಹುದು.

ಈ. 31-12-83 ರವರೆಗೆ 672.056 ರೂ. ಲಕ್ಷಗಳಷ್ಟು ಸಹಾಯ ಧನವನ್ನು ಬಿಡುಗಡೆ ಮಾಡಿದೆ. ಜಿಲ್ಲಾವಾರು ಮಾಹಿತಿಗಾಗಿ ಅನುಬಂಧ 1 ರಲ್ಲಿ ನೋಡಬಹುದು.

ಶ್ರೀ ಅಬ್ದುಲ್ ನಜೀರ್ ಸಾಬ್.— ಇದರಲ್ಲಿ ಒಂದು ತಪ್ಪು ಆಗಿದೆ. ಇದರ ಬಗ್ಗೆ 1983-84ರ ಯೋಜನೆಗೆ ಸಹಾಯಧನಕ್ಕೆ ಇಟ್ಟಿರುವ ಹಣ 14 ಕೋಟಿ ರೂಪಾಯಿಗಳು, ಇದರಲ್ಲಿ ವೆಚ್ಚವಾಗಿರತಕ್ಕದ್ದನ್ನು ಮಾತ್ರ ಉತ್ತರದಲ್ಲಿ ಕೊಟ್ಟಿದ್ದೇವೆ. 1-1 83 ರಿಂದ 31-11-83 ರವರೆಗೆ ಒಟ್ಟು 1 56,02 ಕುಟುಂಬಗಳು ಇದರ ಪ್ರಯೋಜನವನ್ನು ಪಡೆದಿವೆ.

ಶ್ರೀ ಬಿ. ಜಿ. ಬಣಕಾರ್ —ಸರ್ಕಾರದವರು ಇದರಲ್ಲಿ ಗುರಿಯನ್ನು ಮೀರಿ ಸಾಧನೆಯನ್ನು ಮಾಡಿದ್ದಾರೆ, ಇದು ಬಹಳ ಸಂತೋಷ. ಈಗ ಗುರಿಯನ್ನು ಹೊರತು ಪಡಿಸಿದಲ್ಲಿ, ಬೆಂಗಳೂರು ಜಿಲ್ಲೆಯಲ್ಲಿ 54 ಲಕ್ಷ ಜನಸಂಖ್ಯೆ ಇದ್ದರೆ 66 ಸಾವಿರ ಕುಟುಂಬಗಳು, ಬೆಳಗಾಂ ಜಿಲ್ಲೆಯಲ್ಲಿ 30 ಲಕ್ಷ ಜನಸಂಖ್ಯೆ ಇದ್ದರೆ ಕೇವಲ ಆರು ಸಾವಿರ ಕುಟುಂಬಗಳು ಧಾರವಾಡದಲ್ಲಿ 30 ಲಕ್ಷ ಜನಸಂಖ್ಯೆ ಇದ್ದರೆ 10,200 ಕುಟುಂಬಗಳಿಗೆ ಪ್ರಯೋಜನ ದೊರಕಿಸಿಕೊಡುವ ಯೋಜನೆ ಕೈಗೊಳ್ಳಲಾಗಿದೆ. ಆದರೆ ಇಲ್ಲಿ ಭೇದಭಾವ ಆಗಿದೆ. ಪರಿಶಿಷ್ಟ ಪಂಗಡದವರಿಗೆ ತುಮಕೂರು, ಬಳ್ಳಾರಿ ಮತ್ತು ಗುಲ್ಬರ್ಗ, ರಾಯಚೂರು ಜಿಲ್ಲೆಯಲ್ಲಿ ಒಂದು ಕುಟುಂಬಕ್ಕೂ ಕೂಡ ಕೊಟ್ಟಿಲ್ಲ. ಈ ರೀತಿಯಲ್ಲಿ ಆಗದ ಹಾಗೆ ಮಾನ್ಯ ಮಂತ್ರಿಗಳು ನೋಡಿಕೊಳ್ಳುತ್ತಾರೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲಿ ಜನಸಂಖ್ಯೆಗೆ ಅನುಗುಣವಾಗಿ ನಾವು ಗುರಿಯನ್ನು ನಿಗದಿ ಮಾಡುವುದಿಲ್ಲ. ಒಂದು ತಾಲ್ಲೂಕಿಗೆ 600 ಕುಟುಂಬಗಳು ಈ ಯೋಜನೆಯ ಫಲಾನುಭವಿಗಳಾಗಬೇಕು ಎಂದು ನಿಗದಿ ಮಾಡಿದೆ. ಅದರ ಪ್ರಕಾರ ತಾಲ್ಲೂಕಿನಲ್ಲಿ ಆಗ ನೂರು ಜನ ಇದರ ಫಲವನ್ನು ತೆಗೆದು ಕೊಳ್ಳುತ್ತಾರೆ. ಕೆಲವು ಕಡೆ ಕ್ಲಸ್ಟರ್‌ನಲ್ಲಿ ಹಳ್ಳಿಗಳನ್ನು ತೆಗೆದುಕೊಳ್ಳುವಾಗ ಈ ರೀತಿ ಹೆಚ್ಚು ಕಡಿಮೆ ಆಗಬಹುದು. ಆದರೆ ನಮ್ಮ ಗುರಿ ಇರತಕ್ಕದ್ದು 600 ಎಂದು ಮಾತ್ರ. ಇದಕ್ಕೆ ಕಡಿಮೆ ಆಗಬಾರದು, ಆದರೆ ಜಾಸ್ತಿ ಆಗಬಹುದು. ಧಾರವಾಡದಲ್ಲಿ ಇದು ಕಡಿಮೆಯಾಗಿದ್ದರೆ ಹೆಚ್ಚು ಆಗುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಹಾಗೆಯೇ ಮಾನ್ಯ ಸದಸ್ಯರು ಪರಿಶಿಷ್ಟ ಪಂಗಡಗಳವರಿಗೆ ನಾವು ಈ ಯೋಜನೆಯಲ್ಲಿ ಫಲವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈ ಯೋಜನೆಯನ್ವಯ ಇವರಿಗೆ ಶೇಕಡ 30 ರಷ್ಟನ್ನು ಕೊಡಲೇಬೇಕು ಎಂದು ಸರ್ಕಾರದ ಆದೇಶ ಇದೆ ಇದು ಕಡಿಮೆಯಾಗಬಾರದು, ಆದರೆ ಜಾಸ್ತಿಯಾಗಬಹುದು. ಒಟ್ಟು ಗುರಿಯಲ್ಲಿ ಈಗಾಗಲೇ 600ಕ್ಕೂ ಜಾಸ್ತಿ ಇರುತ್ತದೆ. ಆದರೆ ಶೇಕಡ 30 ರಷ್ಟನ್ನು ಕೊಟ್ಟೇ ಕೊಡುತ್ತಾರೆ

ಒಬ್ಬ ಮಾನ್ಯ ಸದಸ್ಯರು — ಐಆರ್‌ಡಿಪಿ ಯೋಜನೆಯಲ್ಲಿ ಕುರಿಗಳನ್ನು ಕೊಳ್ಳುವುದಕ್ಕೆ ಸಾಲವನ್ನು ಬಿ.ಡಿ.ಓ. ಅವರು ಸ್ಯಾಂಕ್ಷನ್ ಮಾಡುತ್ತಾರೆ, ಬ್ಯಾಂಕ್‌ನವರು ಹಣವನ್ನು ಕೊಡುತ್ತಾರೆ. ಇದರಲ್ಲಿ ಸಾಕಷ್ಟು ದುರುಪಯೋಗವಾಗಿದೆ ಎಂದು ಬ್ಯಾಂಕ್‌ನವರು ಬೇರೆಯವರಿಗೆ ಸಾಲ ಕೊಡುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಈ ರೀತಿಯಾಗಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್. ಕೆಲವು ಕಡೆ ಈ ರೀತಿಯಾಗಿ ಆಗಿರುವುದು ನಿಜ ಇದನ್ನು ಮಾನ್ಯ ಸದಸ್ಯರ ನಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇವೆ

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಸಹಾಯಧನ ಎಷ್ಟು ಬಂದಿದೆ ? ತಾವು ಉತ್ತರದಲ್ಲಿ ಇವಕ್ಕೆ 14 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಎಂದು ತಿಳಿಸಿದ್ದೀರಿ. ತಾವು ಕೊಟ್ಟಿರುವ ಹಣವನ್ನು ನೋಡಿದರೆ ಈ ಕಾರ್ಯಕ್ರಮ ಬಹಳ ಮಂದಗತಿಯಿಂದ ಸಾಗುತ್ತಿದೆ. ಇದಕ್ಕೆ ಕಾರಣವೇನು ತಿಳಿಸುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಇದಕ್ಕೆ ಕೇಂದ್ರ ಸರ್ಕಾರದವರು 50 ಪರ್ಸೆಂಟ್ ಕೊಡುತ್ತಾರೆ. ನಾವು 50 ಪರ್ಸೆಂಟ್ ಕೊಡುತ್ತೇವೆ. ಆದರೆ ಈ ಹಣವೂ ಕೂಡ ಸಾಲುತ್ತಿಲ್ಲ. ಈಗಾಗಲೇ ನಾವು ಫಲಾನುಭವಿಗಳನ್ನು ಗುರುತು ಮಾಡಿದ್ದೇವೆ. ಯಾರು ಯಾರಿಗೆ ಕುರಿ, ಕೋಳಿ, ಕತ್ತೆ ಏನೇನು ಹೋಗಬೇಕೋ ಆವನ್ನು ಕೊಡುವುದಕ್ಕೆ ಹಣ ಸಾಲುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.— ಈ ಯೋಜನೆಯನ್ವಯ ಸರ್ಕಾರದವರು ಎಮ್ಮೆ, ಹಸು, ಕುರಿ ಮಗ್ಗೆರೆ ಕೊಟ್ಟಿರುವ ಕಡೆ ಹಣ ದುರುಪಯೋಗವಾಗಿದೆ ಎಂದು ಸ್ಪಷ್ಟವಾಗಿ ನಮಗೆ ಗೊತ್ತಾಗಿದೆ. ಇದಕ್ಕೇನಾದರೂ ಉಪಾಯವನ್ನು ಕಂಡುಹಿಡಿದು ಈ ದುರುಪಯೋಗವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಕೆಲವು ಕಡೆ ಇದು ದುರುಪಯೋಗವಾಗಿದೆ, ಅದಕ್ಕಾಗಿ ಎಲ್ಲಾ ಕಡೆ ಫಲಾನುಭವಿಗಳನ್ನು ಗುರುತಿಸುವಾಗ ಛಲ್ಲಾ ಮಟ್ಟದ ಅಧಿಕಾರಿಗಳು ಹೋಗಿ ಫಲಾನುಭವಿಗಳಿಗೆ ಏಮ್ಮೆ, ಹಸುಗಳನ್ನು ಕೊಡಿಸಿ ಈ ಹಣ ದುರುಪಯೋಗವಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಇನ್ನೊಂದು ವಿಷಯವೆಂದರೆ, ಇದರ ಬಗ್ಗೆ ನಮಗೆ ಕಾನೂನಿನ ಬಲವಿಲ್ಲದ್ದರಿಂದ ಕಾನೂನನ್ನು ಕೂಡ ತರಬೇಕು ಎಂದು ಸರ್ಕಾರದ ಉದ್ದೇಶವಿದೆ.

ಶ್ರೀ ಆರ್. ಬಾಳೆಕುಂದರಗಿ.— ಮಾನ್ಯ ಮಂತ್ರಿಗಳು ಮಾತನಾಡುವಾಗ ಕತ್ತೆಗಳನ್ನು ಕೊಡುವುದಕ್ಕೆ ಬಗ್ಗೆ ಏನೂ ಪ್ರಸ್ತಾಪ ಮಾಡಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕ್ಷಮಿಸಬೇಕು, ಮಾತನಾಡುವ ಭರದಲ್ಲಿ ಆ ರೀತಿಯಾಗಿ ಹೇಳಿದೆ.

ಶ್ರೀ ಎಂ. ಬಿ. ನಾಯಕ್.— ಸರ್ಕಾರದವರು ಕುರುಬರಿಗೆ ಕುರಿಗಳನ್ನು ಕೊಟ್ಟಿದ್ದರೆ, ಕುರಿಗಳು ಇಲ್ಲ ದೊಡ್ಡ ರೈತರಿಗೆ, ಶ್ರೀಮಂತರಿಗೆ ಸಾಲವನ್ನು ಸರ್ಕಾರದವರು ಕೊಟ್ಟಿದ್ದಾರೆ. ಶ್ರೀಮಂತರಿಗೆ ಸಹಾಯವನ್ನು ಮಾಡುವುದನ್ನು ನಿಲ್ಲಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಮಾನ್ಯ ಸದಸ್ಯರು ಇದರ ಬಗ್ಗೆ ವಿವರಗಳನ್ನು ಕೊಟ್ಟರೆ ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್.— ಕೆಲವು ಕಡೆಗಳಲ್ಲಿ ಈ ಸಹಾಯಧನವನ್ನು ಶ್ರೀಮಂತರೇ ಪಡೆದು ಕೊಂಡಿದ್ದಾರೆ, ಶ್ರೀಮಂತರಿಗೆ ಸಹಾಯ ಮಾಡಿದಂಥ ಅಧಿಕಾರಿಗಳ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಇಂಥಿಂಥ ಕ್ಷೇತ್ರದಲ್ಲಿ ಈ ರೀತಿಯಾಗಿದೆ ಎಂದು ಹೇಳಿದರೆ ನಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮುನಿಯಪ್ಪ — ಹಸು ಏಮ್ಮೆಗಳನ್ನು ಕೊಡುವಾಗ ಸರ್ಕಾರದವರು ಇನ್ಷೂರೆನ್ಸ್ ಮಾಡಿಸುತ್ತಾರೆ. ಆದರೂ ಸಹ ಮೂರು ತಿಂಗಳಾದ ಮೇಲೆ ಆ ಏಮ್ಮೆ ಸತ್ತು ಹೋಯಿತು ಎಂದು ಮತ್ತೆ ಸಾಲವನ್ನು ತೆಗೆದ ಕೊಳ್ಳುತ್ತಾರೆ. ಇಂಥ ಕೇಸುಗಳು ಸರಕಾರದ ಗಮನಕ್ಕೆ ಬಂದಿವೆಯೇ ? ಬಂದಿದ್ದರೆ ಅವರ ಮೇಲೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಅಲ್ದುಲ್ ನಜೀರ್ ಸಾಬ್. — ಮಾನ್ಯ ಸದಸ್ಯರು ಇಂಥ ಕಡೆ ಹೀಗೆ ಆಗಿದೆ ಎಂದು ನಿರ್ದಿಷ್ಟವಾಗಿ ಹೇಳಿದರೆ ಅದನ್ನು ನಾನು ತನಿಖೆ ಮಾಡಿಸಿ ನಂತರ ಉತ್ತರವನ್ನು ಹೇಳಬಲ್ಲೆ.

ವಿಷಯ : ತುಂಗಭದ್ರಾ ಪ್ರಾಜೆಕ್ಟ್ ಕಾಲೋನಿಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ವಸತಿ ಸೌಲಭ್ಯಗಳು.

ಪ್ರಶ್ನೆ 209(330) ಶ್ರೀ ಕೆ. ಚೆನ್ನಬಸವನಗೌಡ (ಕೊಡ್ಲಿಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತುಂಗಭದ್ರಾ ಬೋರ್ಡಿನಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರಿಗೆ ಉಚಿತ ವಸತಿ ನೀಡಿರುವಂತೆ ತುಂಗಭದ್ರಾ ಪ್ರಾಜೆಕ್ಟ್ ಕಾಲೋನಿಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ಸಹಾ ಉಚಿತ ವಸತಿಯನ್ನು ಸರ್ಕಾರದವರು ಕಲ್ಪಿಸುವರೆ ;

ಆ) ಮೇಲಿನ ಕಾಲೋನಿಯಲ್ಲಿ ಕೆಲಸ ಮಾಡುವ ನೌಕರರಿಗೆ ಆಯಾ ಇಲಾಖೆಯವರು ಮೇಲಿನ ಅನುಕೂಲತೆ ಮಾಡಲು ಸರ್ಕಾರಿ ಆದೇಶ ಹೊರಡಿಸಿರುವಂತೆ ಶಿಕ್ಷಣ ಇಲಾಖೆಯವರು ಕೂಡ ತಮ್ಮ ಶಿಕ್ಷಕರಿಗೆ ಅನುಕೂಲತೆ ಮಾಡಲು ಸರ್ಕಾರದವರು ಆದೇಶ ಹೊರಡಿಸಿರುವುದು ನಿಜವೆ ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ಮತ್ತು ಆ) ತುಂಗಭದ್ರಾ ಪ್ರಾಜೆಕ್ಟ್ ಕಾಲೋನಿಯಲ್ಲಿ ಕೆಲಸ ಮಾಡುತ್ತಿರುವ ಬೇರೆ ಇಲಾಖೆಯವರಿಗೆ ಉಚಿತ ವಸತಿಯನ್ನು ಕಲ್ಪಿಸಿಕೊಟ್ಟ ಬಗ್ಗೆ ವಿವರಗಳನ್ನು ಪಡದು ಈ ವಿಷಯದಲ್ಲಿ ಶಿಕ್ಷಕರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಚನ್ನಬಸವನಗೌಡ.— ಸ್ವಾಮಿ, ಬೇರೆ ಬೇರೆ ಇಲಾಖೆಯವರಿಗೂ ಕೊಟ್ಟು; ಶಿಕ್ಷಣ ಇಲಾಖೆಯವರಿಗೆ ಕೊಡದೇ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ, 1-1-86 ರಲ್ಲಿ ಅಲ್ಲಿನ ಪ್ರೌಢ ಶಾಲೆಯನ್ನು ಸರ್ಕಾರದ ವಶಕ್ಕೆ ತೆಗೆದ ಕೊಳ್ಳಲಾಗಿದೆ. ಈ ವಿಚಾರದಲ್ಲಿ ವಿವರವಾದ ಮಾಹಿತಿಯನ್ನು ತರಿಸಿ, ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವಂಥ ಉಪಾಧ್ಯಾಯರಿಗೂ ವಸತಿಗಳನ್ನು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ. ಚನ್ನಬಸವನಗೌಡ.— ಸರ್ಕಾರದ ಆಜ್ಞೆ ಪ್ರಕಾರ ಕೊಟ್ಟಿದ್ದೇವೆಂದು ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ; ಸರ್ಕಾರದ ಆಜ್ಞೆಯಲ್ಲಿ ಶಿಕ್ಷಣ ಇಲಾಖೆಯ ನೌಕರರಿಗೂ ಕೊಡುವಂಥ ವ್ಯವಸ್ಥೆ ಏತಕ್ಕೆ ಮಾಡಿಲ್ಲ ?